# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1583 |
| ಸದಸ್ಯರ ಹೆಸರು | ಶ್ರೀ. ಮಧು ಜಿ. ಮಾದೇಗೌಡ |
| ಉತ್ತರಿಸುವ ದಿನಾಂಕ | 19/12/2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೃಷಿ ಯಾಂತ್ರೀಕರಣ ಯೋಜನೆಯಡಿ ವಾರ್ಷಿಕ ಅಂದಾಜು ಎಷ್ಟು ಸಾವಿರ ರೈತರಿಗೆ ಸಹಾಯಧನದ ನೆರವು ನೀಡಲಾಗುತ್ತದೆ; ಇದಕ್ಕಾಗಿ ಕಳೆದ ಮೂರು ವರ್ಷಗಳ ಬಜೆಟ್ ನಲ್ಲಿ ಹಂಚಿಕೆ ಮಾಡಲಾದ ಅನುದಾನ ಎಷ್ಟು;</td><td>ಕೃಷಿ ಯಾಂತ್ರೀಕರಣ ಯೋಜನೆಯಡಿ ವಾರ್ಷಿಕ ಅಂದಾಜು 1 ಲಕ್ಷ ರೈತರಿಗೆ ಸಹಾಯಧನದ ನೆರವು ನೀಡಲಾಗುತ್ತಿದೆ. ಇದಕ್ಕಾಗಿ ಕಳೆದ ಮೂರು ವರ್ಷಗಳ ಬಜೆಟ್ ನಲ್ಲಿ ಹಂಚಿಕೆ ಮಾಡಲಾದ ಅನುದಾನದ ವಿವರಗಳು ಈ ಕೆಳಗಿನಂತಿವೆ.<br>(ರೂ ಲಕ್ಷಗಳಲ್ಲಿ)<br><table><tr><th>ಕ್ರ. ಸಂ</th><th>ವರ್ಷ</th><th>ಬಜೆಟ್ ನಲ್ಲಿ ಹಂಚಿಕೆ ಮಾಡಲಾದ ಅನುದಾನ</th></tr><tr><td>1.</td><td>2022-23</td><td>25130.75</td></tr><tr><td>2.</td><td>2023-24</td><td>38626.04</td></tr><tr><td>3.</td><td>2024-25</td><td>36358.70</td></tr><tr><td>4.</td><td>2025-26</td><td>38382.68</td></tr></table></td></tr>
<tr><td>ಆ)</td><td>ಕೃಷಿ ಯಾಂತ್ರೀಕರಣ ಯೋಜನೆಯಡಿ ಈಗಾಗಲೇ ಅರ್ಜಿ ಸಲ್ಲಿಸಿರುವ ರೈತರು ತಮ್ಮ ಪಾಲಿನ ಹಣದ ಕಂತು ಕಟ್ಟಿದ್ದರೂ ಕೃಷಿ ಯಂತ್ರೋಪಕರಣ ವಿತರಿಸಲು ಸಾಧ್ಯವಾಗದಿರುವುದು ನಿಜವೇ; ಇದಕ್ಕೆ ಕಾರಣಗಳೇನು: (ವಿವರವಾದ ಮಾಹಿತಿ ನೀಡುವುದು)</td><td>ಕೃಷಿ ಯಾಂತ್ರೀಕರಣ ಯೋಜನೆಯಡಿ ಅರ್ಜಿ ಸಲ್ಲಿಸಿರುವ ರೈತರಿಗೆ ಅನುದಾನ ಲಭ್ಯತೆ ಮತ್ತು ಜೇಷ್ಠತೆಗೆ ಅನುಗುಣವಾಗಿ ರೈತರಿಗೆ ತಮ್ಮ ಪಾಲಿನ ವಂತಿಕೆ ಹಣವನ್ನು ಕಟ್ಟಲು ತಿಳಿಸಲಾಗುವುದು. ರೈತರು ತಮ್ಮ ವಂತಿಕೆಯನ್ನು ಕಟ್ಟಿದ ನಂತರ ತಯಾರಕ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ನೀಡಿದ ಮೇಲೆ ಸರಬರಾಜು ಸಂಸ್ಥೆಗಳ ಮೂಲಕ ಯಂತ್ರೋಪಕರಣಗಳನ್ನು ಸರಬರಾಜು ಮಾಡಲಾಗುತ್ತದೆ. ಆದ್ದರಿಂದ ರೈತರ ಪಾಲಿನ ಹಣ ಕಟ್ಟಿ ಕಾರ್ಯಾದೇಶ ನೀಡಿದ ಎಲ್ಲಾ ರೈತರಿಗೆ ಉಪಕರಣಗಳನ್ನು ವಿತರಿಸಲಾಗಿರುತ್ತದೆ.</td></tr>
<tr><td>ಇ)</td><td>ರೈತರಿಂದ ಯಾವ ಯಾವ ಯಂತ್ರೋಕರಣಗಳಿಗೆ ಹೆಚ್ಚಿನ ಬೇಡಿಕೆ ಇದೆ; ಸಾಮಾನ್ಯ ಮತ್ತು ಪರಿಶಿಷ್ಟ ವರ್ಗದ ರೈತರಿಗೆ ಶೇಕಡ ಎಷ್ಟು ಸಹಾಯಧನ ಸಿಗುತ್ತದೆ; ಸಬ್ಸಿಡಿ ಮಿತಿಯು ರೈತರು ಖರೀದಿಸುವ ಕೃಷಿ ಉಪಕರಣಗಳನ್ನು<br>ಅವಲಂಬಿಸಿರುತ್ತದೆಯೇ;</td><td>ರೈತರಿಂದ ರೋಟೋವೇಟರ್, ಎಂ.ಬಿ.ಪ್ಲೋ, ಕಲ್ಟಿವೇಟರ್, ಬಿತ್ತನೆ ಕೂರಿಗೆಗಳು, ರೀಪರ್ಸ್, ಬ್ರಷ್ ಕಟ್ಟರ್, ಪವರ್ ವೀಡರ್, ಸಸ್ಯ ಸಂರಕ್ಷಣಾ ಉಪಕರಣಗಳು, ರಾಶಿಯಂತ್ರ, ಪುಡಿ ಮಾಡುವ ಯಂತ್ರ (ಶ್ರೆಡ್ಡರ್ಸ್), ಛಾಪ್ ಕಟ್ಟರ್ಸ್, ಪಂಪ್ ಸೆಟ್ ಗಳಿಗೆ ಹೆಚ್ಚಿನ ಬೇಡಿಕೆಯಿರುತ್ತದೆ.<br>ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು, ಗರಿಷ್ಟ ಒಂದು ಲಕ್ಷದ ಮಿತಿಯೊಳಗೆ ಸಹಾಯಧನವನ್ನು ನೀಡಲಾಗುತ್ತಿದೆ. 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.<br>ಸಬ್ಸಿಡಿ ಮಿತಿಯು ರೈತರು ಖರೀದಿಸುವ ಕೃಷಿ ಉಪಕರಣದ ಮಾದರಿಯ ಕನಿಷ್ಟ ದರವನ್ನು ಅವಲಂಬಿಸಿರುತ್ತದೆ.</td></tr>
</table>

| | | |
|---|---|---|
| ಈ) | ಹಾಗಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಇಲಾಖೆಯ ವಾರ್ಷಿಕ ಭೌತಿಕ ಗುರಿ, ಒದಗಿಸಿದ ಅನುದಾನ, ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ, ಅವರಿಗೆ ವಿತರಿಸಲ್ಪಟ್ಟ ಕೃಷಿ ಯಂತ್ರೋಪಕರಣಗಳ ಸಂಖ್ಯೆ ಮತ್ತು ಭರಿಸಲಾದ ಆರ್ಥಿಕ ವೆಚ್ಚ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ಇಲಾಖೆಯ ವಾರ್ಷಿಕ ಭೌತಿಕ ಗುರಿ, ಒದಗಿಸಿದ ಅನುದಾನ, ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ, ಅವರಿಗೆ ವಿತರಿಸಲ್ಪಟ್ಟ ಕೃಷಿ ಯಂತ್ರೋಪಕರಣಗಳ ಸಂಖ್ಯೆ ಮತ್ತು ಭರಿಸಲಾದ ಆರ್ಥಿಕ ವೆಚ್ಚದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಉ) | ಸಾಮಾನ್ಯ ವರ್ಗದ ಬೆರಳೆಣಿಕೆ ರೈತರಿಗೆ ಕಡಿಮೆ ಮೊತ್ತದ ಸಣ್ಣಪುಟ್ಟ ಯಂತ್ರೋಪಕರಣಗಳನ್ನು ಕೊಡಲಾಗುತ್ತಿದ್ದು ಇದಕ್ಕೂ ವರ್ಷಗಟ್ಟಲೇ ಕಾಯಬೇಕಾಗಿರುವುದು ನಿಜವೇ ಅನುದಾನ ಕೊರತೆ ಕಾರಣಕ್ಕೆ ಪರಿಶಿಷ್ಟ ರೈತರಿಗೆ ವಿಶೇಷ ಘಟಕ ಯೋಜನೆಯಡಿ ಕೃಷಿ ಯಂತ್ರೋಪಕರಣಗಳ ವಿರತಣೆಯನ್ನೇ ಸ್ಥಗಿತಗೊಳಿಸಲಾಗಿದೆ ಎನ್ನುವ ರೈತರ ಆರೋಪ ಕುರಿತು ಸರ್ಕಾರದ ಸ್ಪಷ್ಟನೆ ಏನು? | ಎಲ್ಲಾ ವರ್ಗದ ರೈತರಿಗೂ ದರ ಕರಾರು ಪಟ್ಟಿಯಲ್ಲಿ ಅನುಮೋದನೆಗೊಂಡ ಎಲ್ಲಾ ಕೃಷಿ ಯಂತ್ರೋಪಕರಣಗಳನ್ನು ಪಡೆಯಲು ಅವಕಾಶವಿರುತ್ತದೆ.<br>ಪ್ರತಿ ವರ್ಷವೂ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗಳಡಿ ಪರಿಶಿಷ್ಟ ಜಾತಿ/ಪಂಗಡದ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಗುತ್ತಿದೆ. 2025-26 ನೇ ಸಾಲಿನಲ್ಲಿ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರಿಗೆ ಒದಗಿಸಲು ರಾಜ್ಯ ಮತ್ತು ಕೇಂದ್ರ ಎರಡು ಸೇರಿ ಒಟ್ಟಾರೆ ರೂ.8614.76 ಲಕ್ಷಗಳ ಅನುದಾನವನ್ನು ಮೀಸಲಿಟ್ಟಿದ್ದು, ಇಲ್ಲಿಯವರೆಗೆ ರೂ.5347.83 ಲಕ್ಷಗಳ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು ಇದರಲ್ಲಿ ರೂ.4394.63 ಲಕ್ಷಗಳ ವೆಚ್ಚದಲ್ಲಿ ಅಂದಾಜು 11237 ರೈತರಿಗೆ ಸಹಾಯಧನ ಒದಗಿಸಲಾಗಿದೆ.<br>ಪರಿಶಿಷ್ಟ ರೈತರಿಗೆ ವಿಶೇಷ ಘಟಕ ಯೋಜನೆಯಡಿ ಕ್ರಿಯಾ ಯೋಜನೆ ಮತ್ತು ಅನುದಾನದ ಲಭ್ಯತೆ ಅನುಸಾರವಾಗಿ ಕೃಷಿ ಯಂತ್ರೋಪಕರಣಗಳ ವಿತರಣೆಯನ್ನು ಮಾಡಲಾಗುತ್ತಿದೆ. |

ಸಂಖ್ಯೆ: AGRI/174/ASC/2025

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು